ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/251/13-14

ದಿನಾಂಕ : 26-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

ವಾದಿಗಳು	ಪ್ರತಿವಾದಿಗಳು
(1) ಶ್ರೀ ಕೆ. ನಾರಾಯಣ ಸ್ವಾಮಿ ತಂದೆ ದಿ. ಕೆ. ಈರಪ್ಪ, ನಿವೃತ್ತ ನೌಕರರು ಮತ್ತು ಕೃಷಿಕರು, ಕಾಕರ್ಲತೋಟ ಬಡಾವಣೆ, ಬಳ್ಳಾರಿ (2) ಶ್ರೀ ಕೆ. ಚಂದ್ರಶೇಖರ ತಂದೆ ದಿ. ಕೆ. ಈರಪ್ಪ, ಕಾಕರ್ಲತೋಟ ಬಡಾವಣೆ, ಬಳ್ಳಾರಿ (ಶ್ರೀ ಎನ್. ಸಿದ್ದಪ್ಪ, ವಕೀಲರು, ಬಳ್ಳಾರಿ)	(1) ತಹಶೀಲ್ದಾರರು, ಭೂ ದಾಖಲೆ ಶಾಖೆ, ಬಳ್ಳಾರಿ (2) ಶ್ರೀ ಕೆ. ಮಲ್ಲಿಕಾರ್ಜಿನ ತಂದೆ ದಿ. ಕೆ. ಬಸಪ್ಪ (3) ಶ್ರೀ ಕೆ. ಚಿದಾನಂದ ತಂದೆ ದಿ. ಬಸಪ್ಪ (4) ಶ್ರೀ ಎಂ. ಗಂಗಾಧರಪ್ಪ ತಂದೆ ಪೆದ್ದ ರಾಮಪ್ಪ, ವಾದಿ 2 ರಿಂದ 3 ರವರ ವಾಸ ಕಾಕರ್ಲತೋಟ ಬಡಾವಣೆ ಬಳ್ಳಾರಿ **(R2,3 & 4- ಶ್ರೀ ನಮೀಮ್ ಮಿಯಾನ್ ಹಾಗೂ ಪಿ ಮಲ್ಲಯ್ಯ, ವಕೀಲರು, ಬಳ್ಳಾರಿ)**

ದಾವಾ ಜಮೀನಿನ ವಿವರ :-

ತಾಲ್ಲೂಕು	ಗ್ರಾಮ	ಸ. ನಂ.	ವಿಸ್ತೀರ್ಣ (ಎಕರೆಗಳಲ್ಲಿ)
ಬಳ್ಳಾರಿ	ಮುಂಡರಗಿ	218/A, 218/B, 218/C	8.86, 4.36, 0.85

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಸರ್ವೆ ದಾಖಲೆಯಂತೆ ಕಂದಾಯ ದಾಖಲೆಗಳಲ್ಲಿ ತಿದ್ದುಪಡಿ ಮಾಡಲು ಕೋರಿ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 11-07-2014,13-03-2015, 12-06-2016, 06-11-2015, ಮತ್ತು 26-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 26-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಮುಂಡರಗಿ ಗ್ರಾಮದ ಸ.ನಂ 218/A, 218/B, 218/C ವಿಸ್ತೀರ್ಣ ಕ್ರಮವಾಗಿ 8.86, 4.36, 0.85 ಎಕರೆ ಜಮೀನುಗಳಿಗೆ ಸಂಬಂಧಿಸಿದಂತೆ ಸರ್ವೆ ದಾಖಲೆಯಂತೆ ಕಂದಾಯ ದಾಖಲೆಗಳಲ್ಲಿ ತಿದ್ದುಪಡಿ ಮಾಡಲು ಕೋರಿರುತ್ತಾರೆ.

ಮುಂದುವರೆದು ಸದರಿ ಪ್ರಕರಣವನ್ನು ಪರಿಶೀಲಿಸಲಾಗಿ ಮುಂಡರಗಿ ಗ್ರಾಮದ ಸ.ನಂ 218/A, 218/B, 218/C ವಿಸ್ತೀರ್ಣ ಕ್ರಮವಾಗಿ 8.86, 4.36, 0.85 ಎಕರೆ ಜಮೀನುಗಳಿಗೆ ಸಂಬಂಧಿಸಿದ ವಿವಾದಾಸ್ಪದ ಪ್ರಕರಣವು, ಇಂಡಿಕರಣಕ್ಕೆ ಸಂಬಂಧಿಸಿದ್ದಾಗಿದ್ದು,ಕಾರಣ ಭೂ-ದಾಖಲೆಗಳ ಸಹಾಯಕ ನಿರ್ದೇಶಕರು ಬಳ್ಳಾರಿ ಇವರು ಉಭಯ ಪಕ್ಷಗಾರರರಿಂದ ಅಗತ್ಯ ದಾಖಲೆಗಳನ್ನು ಪಡೆದು ಸರ್ವೆ ದಾಖಲೆಯನ್ನು ದುರಸ್ಥಿ ಮಾಡಲು ಈ ಕೆಳಕಂಡ ಆದೇಶ.

(ಮುಂದುವರೆದಿದೆ)

ಮುಂದಿನ ಪುಟಕ್ಕೆ....